# ಡಾ। ಎಲ್ಲೂರು ಚಂದ್ರಶೇಖರರಾಯರು-ಒಂದು ಪರಿಚಯ

– ಎಲ್ಲೂರು ಭುವನೇಂದ್ರರಾವ್, ಕೊರಂಗ್ರಪಾಡಿ, ಉಡುಪಿ.

ಎಲ್ಲೂರು ಜೋಯಿಸರು ಎಂದೇ ದ.ಕ. ಜಿಲ್ಲೆಯಾದ್ಯಂತ ಪ್ರಖ್ಯಾತರಾದ ಎಲ್ಲೂರು ಲಕ್ಷ್ಮೀನಾರಾಯಣ ಜ್ಯೋತಿಷ್ಕರ ಸುಪುತ್ರರಾಗಿ ನನ್ನ ಅಗ್ರಜರಾದ ಚಂದ್ರಶೇಖರರಾಯರು ತಾ. 08-08-1938ರಲ್ಲಿ ಎಲ್ಲೂರಿನಲ್ಲಿ ಜನಿಸಿದರು. ನಮ್ಮ ತಾಯಿ ಕುಂಜೂರಿನ ರಾಮಚಂದ್ರರಾವ್ ರವರ ಸುಪುತ್ರಿ ಗಿರಿಜಮ್ಮ. ಎಳವೆಯಿಂದಲೇ ಚುರುಕುತನವನ್ನು ಪಡೆದಿದ್ದ ಚಂದ್ರಶೇಖರರಾಯರು ತನ್ನ ಪ್ರಾಥಮಿಕ 5ನೇ ತರಗತಿಯವರೆಗಿನ ವಿದ್ಯಾಭ್ಯಾಸವನ್ನು ಎಲ್ಲೂರಿನ ಕಸ್ಬಾ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಮುಗಿಸಿದರು. ಮಾಧ್ಯಮಿಕ ವಿದ್ಯಾಭ್ಯಾಸವನ್ನು ಎರ್ಮಾಳಿನ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮಾಡಿ ಪ್ರೌಢಶಿಕ್ಷಣವನ್ನು ಅದಮಾರು ಪ್ರೌಢಶಾಲೆಯಲ್ಲಿ ಮುಗಿಸಿದರು. ಅನಂತರ ಎಂ.ಜಿ.ಎಂ. ಕಾಲೇಜಿನಲ್ಲಿ ಪಿ.ಸಿ.ಬಿ. ಐಚ್ಛಿಕ ವಿಷಯದಲ್ಲಿ 2 ವರ್ಷಗಳ ಇಂಟರ್ ಮೀಡಿಯೇಟ್ (ಈಗಿನ ಪಿ.ಯು.ಸಿ.) ವ್ಯಾಸಂಗವನ್ನು ಮಾಡಿದರು. ಮುಂದೆ ವೈದ್ಯಕೀಯ ಶಿಕ್ಷಣವನ್ನು ಮಾಡಬೇಕೆನ್ನುವ ಅಭಿಲಾಷೆಯಿಂದ ಮೈಸೂರಿನ ಗವರ್ನಮೆಂಟ್ ಕಾಲೇಜ್ ಆಫ್ ಇಂಡಿಯನ್ ಮೆಡಿಸಿನ್ ಕಾಲೇಜಿನಲ್ಲಿ ಜಿ.ಸಿ.ಐ.ಎಂ. ಪದವಿಗೆ ಸೇರಿದರು. ತನ್ನ ಪ್ರಾಮಾಣಿಕ ಪ್ರಯತ್ನಕ್ಕೆ, ಪ್ರತಿಫಲವಾಗಿ ಉತ್ತಮ ಶ್ರೇಣಿಯೊಂದಿಗೆ ಪದವಿಯನ್ನು ಮುಗಿಸಿ ಮಡಿಕೇರಿಯ ಸರಕಾರಿ ಆಸ್ಪತ್ರೆಯಲ್ಲಿ ವೈದ್ಯಕೀಯ ತರಬೇತಿಯನ್ನು ಪಡೆದರು. 1964ರಲ್ಲಿ ತನ್ನ ವೈದ್ಯಕೀಯ ಶಿಕ್ಷಣ ಮತ್ತು ತರಬೇತಿಗಳನ್ನು ಮುಗಿಸಿ ಎಲ್ಲೂರಿನ ಮನೆಗೆ ಬಂದರು.

ಅಣ್ಣ ಡಾ। ಚಂದ್ರಶೇಖರರಾಯರು ಸುಮ್ಮನೆ ಕಾಲಹರಣ ಮಾಡುವ ಸ್ವಭಾವದವರಲ್ಲ. ಎಲ್ಲೂರಿಗೆ ಬಂದವರೇ ಸುಸಜ್ಜಿತ ಕ್ಲಿನಿಕ್‌ನ್ನು ಆರಂಭಿಸಿದರು. ತಂದೆಯವರು ರೋಗಿಗಳಿಗೆ ಆಯುರ್ವೇದ ಶಾಸ್ತ್ರಾಧಾರಿತ ಚಿಕಿತ್ಸೆ ನೀಡುತ್ತಿದ್ದರೆ, ಚಂದ್ರಶೇಖರರಾಯರು ಆಧುನಿಕ ವಿಧಾನದಲ್ಲಿ ಚಿಕಿತ್ಸೆ ಕೊಡುತ್ತಿದ್ದರು. ಇವರ ರೋಗ ಪತ್ತೆ ಹಚ್ಚುವ ನೈಪುಣ್ಯ ಮತ್ತು ಚಿಕಿತ್ಸಾ ವಿಧಾನಗಳಿಂದ ಅತೀ ಶೀಘ್ರದಲ್ಲಿ ಜನಪ್ರಿಯ ವೈದ್ಯರಾದರು. ಆಸುಪಾಸಿನ ಊರುಗಳಿಂದ ರೋಗಿಗಳು ಇವರಲ್ಲಿ ಚಿಕಿತ್ಸೆ ಪಡೆಯಲು ಆರಂಭಿಸಿದರು. ಆದರೆ ತಾಲೂಕು ಲೋಕಲ್ ಫಂಡ್ ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿಯಾಗಿ ನೇಮಕ ಆಜ್ಞೆ ಬಂದಾಗ ಜನರಿಗೆ ಹೆಚ್ಚಿನ ಸೇವೆ ಸಲ್ಲಿಸುವ ಭರವಸೆ ಮತ್ತು ಉತ್ಸಾಹದೊಂದಿಗೆ ಎಲ್ಲೂರಿನ ಕ್ಲಿನಿಕ್ ಬಿಟ್ಟು ಮಲ್ಪೆ ಆಸ್ಪತ್ರೆಯಲ್ಲಿ ಸೇವೆಗೆ ಸೇರಿಕೊಂಡರು.

ಅಣ್ಣ ಡಾ। ಚಂದ್ರಶೇಖರರಾಯರು ತನ್ನ ಕಾರ್ಯಕ್ಷೇತ್ರದಲ್ಲಿ ಬಹುಬೇಗನೆ ಯಶಸ್ಸನ್ನು ಗಳಿಸಿದರು. ತನ್ನ ನಿಸ್ವಾರ್ಥ, ಪ್ರಾಮಾಣಿಕ, ದಕ್ಷ ಸೇವೆಯಿಂದಾಗಿ ಜನರ ಪ್ರೀತಿಯನ್ನು ಗಳಿಸಿದರು. ಸೇವೆಯೇ ತನ್ನ ಪರಮಗುರಿ ಎಂದು ನಿರ್ಧರಿಸಿದ್ದ ಶ್ರೀಯುತರು ಹಗಲು ಇರುಳು ಎನ್ನದೆ ರೋಗಿಗಳ ಸೇವೆಗೈದರು. ಆಗಿನ ಕಾಲದಲ್ಲಿ ಮಲ್ಪೆಯ ಪರಿಸರದಲ್ಲಿಯೇ ಅತ್ಯಂತ ಉತ್ತಮ ವೈದ್ಯರೆಂದು ಹೆಸರುವಾಸಿಯಾಗಿದ್ದರು. ಸರಕಾರಿ ನಿಯಮದಂತೆ ಮಲ್ಪೆಯಿಂದ ಶಿರ್ವಕ್ಕೆ ವರ್ಗಾವಣೆಗೊಂಡರು.

ಶಿರ್ವದಲ್ಲಿ ಇವರು ಮಾಡಿದ ಸೇವೆ ಅಪಾರ. ಇವರ ಸಾಧನೆ ಅನನ್ಯ. ತನ್ನ ವೈದ್ಯಕೀಯ ಜೀವನದ ಉತ್ತುಂಗಕ್ಕೆ ಏರಿದ ಕಾಲವೇ ಶಿರ್ವದಲ್ಲಿನ ಸೇವಾವಧಿ. ಸರಕಾರಿ ಆಸ್ಪತ್ರೆ ಕಂಡರೆ ಮುಖತಿರುಗಿಸಿಕೊಂಡು ಹೋಗುತ್ತಿದ್ದ ಕಾಲವದು. ಆಸ್ಪತ್ರೆಗಳಲ್ಲಿ ದೊರಕಬೇಕಾದ ಉಚಿತ ಔಷಧಿಗಳ ಪೂರೈಕೆ ಸರಿಯಾಗಿ ಆಗುತ್ತಿರಲಿಲ್ಲ. ಪೂರೈಕೆಯಾದ ಔಷಧಿಗಳನ್ನು ಕೂಡಾ ಸರಿಯಾಗಿ ಬಳಸುವವರಿಲ್ಲ. ವೈದ್ಯರಾಗಲೀ ಸಿಬ್ಬಂದಿಯಾಗಲೀ ಸರಿಯಾಗಿ ಆಸ್ಪತ್ರೆಗೇ ಬರುತ್ತಿರಲಿಲ್ಲ. ಇಂತಹ ಅರಾಜಕ ಪರಿಸ್ಥಿತಿಯಲ್ಲಿ ಶಿರ್ವದ ಸರಕಾರಿ ಆಸ್ಪತ್ರೆಗೆ ವೈದ್ಯಾಧಿಕಾರಿಯಾಗಿ ಬಂದರು. ಇಲ್ಲಿಯ ಜನರು ಇವರ ಕಾರ್ಯಕ್ಷಮತೆ, ದಕ್ಷತೆ, ಪ್ರಾಮಾಣಿಕತೆ, ನಿಖರ ರೋಗನಿಧಾನ ಮತ್ತು ರೋಗಿಗಳ ಬಗೆಗಿರುವ ಕಾಳಜಿಗಳನ್ನು ಗುರುತಿಸಿದರು. ದಿನಕ್ಕೆ 10ರೋಗಿಗಳು ಬರುತ್ತಿದ್ದ ಈ ಆಸ್ಪತ್ರೆಗೆ ಇವರ ಆಗಮನಾನಂತರ ದಿನವೊಂದಕ್ಕೆ 200ಕ್ಕಿಂತಲೂ ಹೆಚ್ಚು ಹೊರರೋಗಿಗಳು ತಪಾಸಣೆಗೆ ಬರುತ್ತಿದ್ದುದು ಇವರ ಸೇವಾಕ್ಷಮತೆಗೆ ಹಿಡಿದ ಕೈಗನ್ನಡಿ. ಇವರ ಕಾಲದಲ್ಲಿ ಆಸ್ಪತ್ರೆ ಕ್ಷ-ಕಿರಣ ಉಪಕರಣ ಮತ್ತು ಇತರ ತಪಸಣಾ ಉಪಕರಣಗಳೊಂದಿಗೆ ಸುಸಜ್ಜಿತಗೊಂಡಿತು. ಶಿರ್ವದ ಚರಿತ್ರೆಯಲ್ಲಿ ಮೊದಲ ಬಾರಿಗೆ ಆಸ್ಪತ್ರೆಯಲ್ಲಿದ್ದ 20 ಹಾಸಿಗೆಗಳು ಒಳರೋಗಿಗಳಿಂದ ಭರ್ತಿಯಾದವು. ತನ್ನ ಜೀವನದ ಸುದೀರ್ಘ ಸೇವೆಯನ್ನು ಶಿರ್ವದಲ್ಲಿ ಮಾಡಿದರು. ಅಲ್ಲಿಯ ಜನರ ಹೃದಯವನ್ನು ಗೆದ್ದರು. ಇಂದಿಗೂ ಕೆಲವರು ಚಿಕಿತ್ಸೆಗಾಗಿ ಅವರನ್ನು ಅರಸಿಕೊಂಡು ಕುಕ್ಕಿಕಟ್ಟೆಯ ಮನೆಗೆ ಬರುತ್ತಿರುವುದು ಅವರ ಸಾಧನೆಯನ್ನು ಸೂಚಿಸುತ್ತದೆ.

ಶಿರ್ವದಲ್ಲಿ ತನ್ನ ಸೇವಾವಧಿಯ ನಂತರ ಇವರು ಹೂಡೆಗೆ ವರ್ಗಾವಣೆಯಾದರು. ತನ್ನ ಜೀವನದ ಕೊನೆಯ ಸರಕಾರಿ ಸೇವೆಯನ್ನು ಮಣಿಪುರದಲ್ಲಿ ಮಾಡಿದರು. ಉದ್ಯಾವರ ಆಯುರ್ವೇದ ಕಾಲೇಜಿನಲ್ಲಿ ವಿಶೇಷ ಉಪನ್ಯಾಸಕಾರರಾಗಿ ಸೇವೆ ಸಲ್ಲಿಸಿದರು. ಸರಕಾರಿ ನಿಯಮದಂತೆ 1998ರಲ್ಲಿ ಸೇವೆಯಿಂದ ನಿವೃತ್ತಿಯನ್ನು ಹೊಂದಿದರು. ತನ್ನ ಜೀವನದ 34 ವರ್ಷಗಳ ಸುದೀರ್ಘ ಸೇವಾವಧಿಯಲ್ಲಿ ತನ್ನ ಕರ್ತವ್ಯಪರತೆಯಿಂದ ಜನಮನ್ನಣೆ ಗಳಿಸಿದರು.

ವೈದ್ಯಕೀಯ ವೃತ್ತಿಯನ್ನು ಆರಂಭಿಸಿದಂದಿನಿಂದಲೂ ಇವರಿಗೆ ಓದುವ ಮತ್ತು ಬರೆಯುವ ಗೀಳು. ತನ್ನ ಬಿಡುವಿನ ವೇಳೆಗಳಲ್ಲೆಲ್ಲಾ ಯಾವುದಾದರೊಂದು ಪುಸ್ತಕವನ್ನು ಓದುತ್ತಿದ್ದರು. ಇವರಿಗೆ ಓದಿನಲ್ಲಿ ಎಷ್ಟು ಆಸಕ್ತಿ ಮತ್ತು ಏಕಾಗ್ರತೆ ಇತ್ತೆಂದರೆ ಆ ಪುಸ್ತಕವನ್ನು ಪೂರ್ತಿಮುಗಿಸದೆ ಕೆಳಗೆ ಇಡುತ್ತಿರಲಿಲ್ಲ. ಎಷ್ಟೇ ಪುಟಗಳ ಪುಸ್ತಕವೇ ಆಗಲಿ ಕೇವಲ ಒಂದೆರಡು ಗಂಟೆಗಳಲ್ಲಿ ಅದನ್ನು ಓದಿ ಮುಗಿಸುತ್ತಿದ್ದರು ಮಾತ್ರವಲ್ಲ ಅದರ ಸಾರಾಂಶವನ್ನು ಆಮೂಲಾಗ್ರವಾಗಿ ಹೇಳುತ್ತಿದ್ದರು. ಆ ವಿಚಾರದ ಮೇಲೆ ಚರ್ಚಿಸಲು ಸಮರ್ಥರೂ ಆಗಿದ್ದರು. ಅಂತಹ ತೀಕ್ಷ್ಣ ಗ್ರಹಣಶಕ್ತಿ ಅವರದು. ಸಂಸ್ಕೃತವನ್ನು ಅಭ್ಯಾಸ ಮಾಡಿರುವುದರಿಂದ ಭಾಷೆಯ ಮೇಲೆ ಉತ್ತಮ ಹಿಡಿತವಿತ್ತು.

ಅಣ್ಣ ಡಾ। ಚಂದ್ರಶೇಖರರಾಯರು ಉತ್ತಮ ಬರಹಗಾರರು. ವೈದ್ಯಕೀಯ ಪದವಿ ಪಡೆದಂದಿನಿಂದಲೂ ಹಲವಾರು ಲೇಖನಗಳನ್ನು ಬರೆದಿದ್ದಾರೆ. ಆಯುರ್ವೇದದ ಬಗ್ಗೆ ಇವರಿಗೆ ವಿಶೇಷ ಆಸಕ್ತಿ. ಆದ್ದರಿಂದ ಈ ಶಾಸ್ತ್ರವನ್ನು ಆಳವಾಗಿ ಅಧ್ಯಯನ ಮಾಡಿ ಆಧುನಿಕ ಚಿಕಿತ್ಸಾ ವಿಧಾನ ಮತ್ತು ಆಯುರ್ವೇದ ಚಿಕಿತ್ಸಾ ವಿಧಾನಗಳಿಗಿರುವ ಸಾಮ್ಯತೆ ಮತ್ತು ವ್ಯತ್ಯಾಸಗಳ ಬಗ್ಗೆ ಅಧ್ಯಯನ ಮಾಡಿದರು. ಇವರು ಬರೆದ "ಆಯುರ್ವೇದದ ವಿವಿಧ ಚಿಕಿತ್ಸಾ ವಿಧಾನ ಮತ್ತು ಆಧುನಿಕ ಚಿಕಿತ್ಸೆ" ಎಂಬ ಲೇಖನವು ಆಗಿನ ರಾಯಬಾರಿ ಪತ್ರಿಕೆಯಲ್ಲಿ ಪ್ರಕಟವಾಗಿತ್ತು. ನಿವೃತ್ತಿಯ ನಂತರ ಕುಕ್ಕಿಕಟ್ಟೆಯ ಸ್ವಂತಮನೆಯಲ್ಲಿ ಖಾಸಗಿ ವೈದ್ಯವೃತ್ತಿಯನ್ನು ಮಾಡುತ್ತಿದ್ದರು. ಸರಕಾರಿ ಸೇವೆಯಿಂದ ನಿವೃತ್ತಿ ಪಡೆದ ನಂತರ ಪ್ರಾಪಂಚಿಕ ಬದುಕಿನ ಪ್ರವೃತ್ತಿಯನ್ನು ಕಡಿಮೆ ಮಾಡಿ ಆಧ್ಯಾತ್ಮದ ಕಡೆಗೆ ತನ್ನ ಮನಸ್ಸನ್ನು ಹೊರಳಿಸಿದರು. ಹಲವಾರು ಪ್ರಮಾಣಿತ ಗ್ರಂಥಗಳನ್ನು ಅಧ್ಯಯನ ಮಾಡಿದರು. ಬದುಕಿನ ನಿಜವಾದ ಅರ್ಥವನ್ನು ಕಂಡುಕೊಳ್ಳಲು ವೇದ, ವೇದಾಂತ, ಉಪನಿಷತ್ತುಗಳು, ಭಗವದ್ಗೀತೆ ಇತ್ಯಾದಿ ಧರ್ಮಶಾಸ್ತ್ರಗಳನ್ನು ಜೀರ್ಣಿಸಿಕೊಂಡರು. ಅದರ ಫಲವಾಗಿ ಮುಂದಕ್ಕೆ ಇವರು ಹಲವಾರು ಆಧ್ಯಾತ್ಮಿಕ ಲೇಖನಗಳನ್ನು ಬರೆದು ಧಾರ್ಮಿಕ ಪ್ರಪಂಚಕ್ಕೆ ಅಮೂಲ್ಯ ಸೇವೆಯನ್ನು ಕೊಟ್ಟರು.

ಅಣ್ಣ ಡಾ। ಚಂದ್ರಶೇಖರರಾಯರು ಹಲವಾರು ಆಧ್ಯಾತ್ಮ ಲೇಖನ ಮತ್ತು ಪುಸ್ತಕಗಳನ್ನು ಬರೆದಿದ್ದಾರೆ. ಅನುಭವದ ಪಾಠ ಮತ್ತು ಅನುಭವವಿಲ್ಲದ ಉಪದೇಶ; ಪುನರ್ಜನ್ಮ; ನಡೆನುಡಿ ಆಚಾರ ವಿಚಾರ; ನಿಂದಕರಿರಬೇಕು; ಪ್ರಪಂಚ - ಒಂದು ಚಿಂತನೆ; ಉಪನಿಷತ್ತುಗಳನ್ನು ಓದಿ, ಕೇಳಿ ತಿಳಿಯಿರಿ; ಸರ್ವಮಾತ್ಮಾನಾಂ ಪಶ್ಯತಿ; ಆತ್ಮನ ಸ್ವರೂಪ ಇತ್ಯಾದಿ ಹಲವಾರು ಆಧ್ಯಾತ್ಮಿಕ ಲೇಖನಗಳನ್ನು ಬರೆದಿದ್ದಾರೆ. ಅನುಭವ; ಆತ್ಮಾನುಸಂಧಾನ ಆತ್ಮವಿಸ್ಮೃತಿ, ಈಶ್ವರ ಇತ್ಯಾದಿ ಪುಸ್ತಕಗಳನ್ನು ಬರೆದಿದ್ದಾರೆ.

"ಶ್ರೀ ಶಂಕರಾಚಾರ್ಯರ ದೃಷ್ಠಿಯಲ್ಲಿ ಮಾನವನ ಬದುಕಿನ ಒಂದು ಸಾರ್ಥಕ್ಯ" ಎಂಬ ಲೇಖನಕ್ಕೆ ಶ್ರೀಮತಿ ಕಮಲಾ ಬ್ಯಾ ಕುಂದಾಪುರ ಮೆಮೋರಿಯಲ್ ಟ್ರಸ್ಟಿನ ವತಿಯಿಂದ ರಾಜ್ಯ ಮಟ್ಟದ ಪ್ರಶಸ್ತಿ ದೊರೆತಿದೆ. "ಪರಿಶುದ್ಧ ಮತ್ತು ಸಾರ್ಥಕ ಬದುಕಿಗೆ ಭಗವದ್ಗೀತೆಯ ತತ್ವಗಳು" ಎಂಬ ಲೇಖನಕ್ಕೂ ರಾಜ್ಯ ಮಟ್ಟದ ಪುರಸ್ಕಾರ ದೊರೆತಿದೆ. ಇವರ ಹಲವಾರು ಬರಹಗಳು ಶ್ರೀ ಶಾರದಾ ಪತ್ರಿಕೆಯಲ್ಲಿ ಪ್ರಕಟವಾಗಿವೆ.

ಅಣ್ಣ ಡಾ। ಚಂದ್ರಶೇಖರರಾಯರು ಶ್ರೀ ಸುಬ್ರಹ್ಮಣ್ಯ ಸಭಾದ ನಿರ್ದೇಶಕರೂ, ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ, ಉಡುಪಿ ಇದರ ನಿರ್ದೇಶಕರೂ, ಶ್ರೀ ಶಾರದಾ ವೇದಿಕೆಯ ಮಹಾಪೋಷಕರೂ, ಶ್ರೀ ಶಾರದಾ ಪತ್ರಿಕೆಯ ಓರ್ವ ಅಂಕಣಕಾರರೂ, ಅಲೆವೂರು ನೆಹರೂ ಹೈಸ್ಕೂಲಿನ ಆಡಳಿತ ಮಂಡಳಿಯ ಸದಸ್ಯರೂ ಆಗಿದ್ದರು.

ಡಾ। ಚಂದ್ರಶೇಖರರಾಯರದು ಯಾರಿಗೂ, ಯಾವ ಸನ್ನಿವೇಶದಲ್ಲಿಯೂ ಜಗ್ಗದ, ಬಗ್ಗದ ಸ್ವಭಾವ. ತಾನು ನಂಬಿದ ತತ್ವಗಳನ್ನು ಬಲವಾಗಿ ನಂಬಿ ಅದರಂತೆ ನಡೆದವರು. ಇವರು ಕಾರ್ಯಸಾಧನೆಗಾಗಿ ಎಂದೂ ಲಂಚ ಕೊಟ್ಟವರಲ್ಲ ಮತ್ತು ತಾನು ಮಾಡಿದ ಕೆಲಸಕ್ಕೆ ಎಂದೂ ಪ್ರತಿಫಲ ಅಪೇಕ್ಷಿಸಿದವರಲ್ಲ. ಹಲವಾರು ಸಂಘ-ಸಂಸ್ಥೆಗಳಿಗೆ ಸಹಸ್ರಾರು ರೂಪಾಯಿಗಳನ್ನು ಪ್ರಚಾರವಿಲ್ಲದೆ ದೇಣಿಗೆಯಾಗಿ ನೀಡಿದ್ದಾರೆ. ಇವರು ಯಾರ್‍ಯಾರಿಗೆ ಎಷ್ಟೆಷ್ಟು ಸಹಾಯಧನ ನೀಡಿದ್ದಾರೆಂಬ ವಿಷಯ ಮನೆಯವರಿಗೂ ತಿಳಿದಿಲ್ಲ. ಆದರೆ ತನ್ನ ದಾನ ಅಪಾತ್ರರ ಕೈಗೆ ಹೋಗದಂತೆ ಎಚ್ಚರಿಕೆ ವಹಿಸುತ್ತಿದ್ದರು. ಇವರ ಸತ್ಯನಿಷ್ಠುರತೆ ಹಲವಾರು ಸಂದರ್ಭಗಳಲ್ಲಿ 'ಸಿಡುಕುತನ" ಎಂಬಂತೆ ಭಾಸವಾದರೂ ಅಂತರಂಗದಲ್ಲಿ ಅಷ್ಟೇ ಮೃದುತ್ವವನ್ನು ಹೊಂದಿದ್ದರು.

ನಮ್ಮ ತೀರ್ಥರೂಪರಾದ ಎಲ್ಲೂರು ಲಕ್ಷ್ಮೀನಾರಾಯಣ ಜ್ಯೋತಿಷ್ಕರು ಗತಿಸಿದ ನಂತರ ನಮ್ಮ ಮನೆಯ ಎಲ್ಲಾ ಸಮಸ್ಯೆಗಳಿಗೆ ಸಕಾರಾತ್ಮವಾಗಿ ಸ್ಪಂದಿಸಿ ತಂದೆಯ ಅಗಲಿದ ಸ್ಥಾನವನ್ನು ಭಾವನಾತ್ಮವಾಗಿ ತುಂಬಿದರು. ಜವಾಬ್ದಾರಿಯಿಂದ ನಡೆದು ಆದರಿಸಿದರು. ಮನೆಯಲ್ಲಿ ಏನೇ ಸಮಸ್ಯೆ ಬಂದರೂ ಮೊದಲು ಅಣ್ಣನಲ್ಲಿ ಹೋಗಿ ತಿಳಿಸಿ ಪರಿಹಾರ ಕೇಳುವುದಿತ್ತು. ಸರಕಾರಿ ಸೇವೆಯಿಂದ ನಿವೃತ್ತಿಯಾದ ನಂತರ ಅವರ ಮನಸ್ಸು ಹೆಚ್ಚು ಹೆಚ್ಚು ಆಧ್ಯಾತ್ಮದ ಕಡೆಗೆ ವಾಲಿತು. ಇತ್ತೀಚಿನ ವರ್ಷಗಳಲ್ಲಿ ಸಂಸಾರದಲ್ಲಿ ಇದ್ದೂ ಇಲ್ಲದವನಂತೆ ನೀರಿನ ಮೇಲಿನ ಕಮಲದಂತೆ ತಾಸುಗಟ್ಟಲೆ ಧ್ಯಾನದಲ್ಲಿ ತೊಡಗುತ್ತಿದ್ದರು. ತಾನು ಗತಿಸುವ ಕೆಲವು ದಿನಗಳ ಹಿಂದೆ ಮನೆಯಲ್ಲಿ ಎಲ್ಲರಲ್ಲಿಯೂ "ನಾನು ಬೆಳಕು ಕಂಡಿದ್ದೇನೆ" ಎಂದು ಹೇಳುತ್ತಿದ್ದರಂತೆ. ಜುಲೈ ತಿಂಗಳ 17ರಂದು ಬೆಳಗ್ಗಿನಿಂದ ರಾತ್ರಿಯವರೆಗೆ ತನ್ನ ಎಲ್ಲಾ ಕೆಲಸಗಳ ತಾನೇ ಚುರುಕಿನಿಂದ ದಿನನಿತ್ಯದಂತೆ ಮಾಡಿ ರಾತ್ರಿ ಮೊಮ್ಮಕ್ಕಳೊಂದಿಗೆ ಆಟವಾಡಿ 10 ಗಂಟೆಗೆ ಮಲಗಿದ ಅಣ್ಣ ನಿದ್ದೆಯಲ್ಲಿಯೇ ಚಿರನಿದ್ರೆಯನ್ನು ಹೊಂದಿದರು. "ವಿನಾಧೈನ್ಯೇನ ಜೀವನಂ, ಅನಾಯಾಸೇನ ಮರಣಂ" ಎಂಬಂತೆ ತನ್ನ ಅಂತಿಮ ಕ್ಷಣದವರೆಗೂ ಯಾರಿಂದಲೂ ಯಾವುದೇ ರೀತಿಯ ಸಹಾಯವನ್ನು ಪಡೆಯದ ಅವರು ನೋವಿಲ್ಲದ ಮರಣವನ್ನು ಹೊಂದಿದರು. ತನ್ನ ಶರೀರವನ್ನು ಬಿಟ್ಟು ಸಂಸಾರ ಬಂಧನದಿಂದ ಮುಕ್ತರಾದರು. ಜನನ ಮರಣಗಳಿಂದ ಮುಕ್ತರಾದರು. ಶಾಶ್ವತ ಮುಕ್ತಿಯನ್ನು ಪಡೆದರು. ಹುಟ್ಟು ಸಾವಿಲ್ಲದ ಚೈತನ್ಯ ಸ್ವರೂಪಿ ಅಣ್ಣನ ಆತ್ಮ ಜ್ಯೋತಿಗೆ ಕೋಟಿಕೋಟಿ ನಮನಗಳು.

# ನೆನಪುಗಳು.....

– ಡಾ। ಸುದರ್ಶನ ರಾವ್, ಕುಕ್ಕಿಕಟ್ಟೆ

ಆಗ ನನಗೆ ಹೆಚ್ಚೆನಂಶ 7 ಅಥವಾ 8 ವರ್ಷ ಪ್ರಾಯ. ಹೊಸ ಚಡ್ಡಿ ಬೇಕೆಂದು ಹಟ ಮಾಡಿದ್ದೆ. "ಹೋಗು ಆಟ ಆಡಿ ಬಾ, ಹೊಸ ಚಡ್ಡಿ ತರುತ್ತೇನೆ" ಎಂದು ಕಳಿಸಿದರು ಅಪ್ಪ. ಅದೇಕೋ ಮಧ್ಯದಲ್ಲೇ ವಾಪಾಸು ಬಂದೆ ನಾನು. ಆಗ ನನ್ನ ಅಪ್ಪ ಮತ್ತು ಅಮ್ಮ ಸೇರಿ ನನ್ನ ಹಳೆಯ ನೀಲಿ ಚಡ್ಡಿಯಲ್ಲಿ ಎದ್ದು ಬಂದ ನೂಲುಗಳನ್ನು ಕತ್ತರಿಸಿ ಚಡ್ಡಿಯನ್ನು ಹೊಸತಾಗಿ ಕಾಣಿಸುವ ಪ್ರಕ್ರಿಯೆಯಲ್ಲಿ ತೊಡಗಿದ್ದರು. ಸಣ್ಣವನಾದರೂ ನನಗೆ ಅವರು ಮಾಡುತ್ತಿದ್ದ ಕಾಯಕವೇನೆಂದು ಅರ್ಥವಾಗಿತ್ತು. ಹಟಮಾಡಿದೆನಾದರೂ ಅದರ ಹಿಂದಿದ್ದ ಅಪ್ಪ ನ ನೋವು ನನಗೆ ಅರ್ಥವಾಗಿ ಸುಮ್ಮನಾಗಿದ್ದೆ. ನನಗೆ ವಯಸ್ಸು ಬುದ್ಧಿ ಬೆಳೆದ ಹಾಗೆ ಬೇರೆ ಬೇರೆ ಸಂದರ್ಭಗಳಲ್ಲಿ ಆ ಘಟನೆ ನೆನಪಾದಾಗಲೆಲ್ಲ ಅದರ ಹಿಂದಿರುವ ನೋವಿಗೆ ಬೇರೆ ಬೇರೆ ಅರ್ಥವನ್ನು ಕಂಡುಕೊಳ್ಳಲು ಸಮರ್ಥನಾಗಿದ್ದೆ. ಮೊನ್ನೆ ಅವರು ನಿಧನರಾದಾಗ ನನಗೆ ಇದೇ ನೆನಪು ಮೊದಲು ಬಂತು.

ಅಂದಿನಿಂದ ಮೊನ್ನೆಯತನಕ ಅಂದರೆ ಅವರು ತೀರಿ ಹೋಗುವ ತನಕ ಅವರೊಂದಿಗೆ ಅತ್ಯಂತ ಹೆಚ್ಚು ಸಮಯ ಕಳೆದವರಲ್ಲಿ ನನ್ನ ಅಮ್ಮನನ್ನು ಬಿಟ್ಟರೆ ನಾನೇ ಆಗಿದ್ದೇನೆ. ಅವರ ಒಳ ಹೊರಗನ್ನು ನಾನು ನನ್ನದೇ ರೀತಿಯಲ್ಲಿ ತಿಳಿದುಕೊಂಡಿದ್ದೇನೆ. ಸ್ವತಃ ವೈದ್ಯನಾದರೂ ಎಲ್ಲೂರು ಜೋಯಿಸರೆಂದು ಖ್ಯಾತಿ ಪಡೆದ ತಂದೆಯ ಮಗನಾದರೂ ಬಡ ಮಧ್ಯಮ ವರ್ಗದ ಸಾಮಾನ್ಯ ವ್ಯಕ್ತಿಯಾಗಿ ಬೆಳೆದು ಬಾಳಿದರು. ತಾನು ಸೇರಿದ್ದ ಸರಕಾರಿ ಕೆಲಸಕ್ಕೆ ಪ್ರಥಮ ಪ್ರಾಶಸ್ತ್ಯ ನೀಡಿದರು. ಕಠಿಣ ಪರಿಶ್ರಮ ಹಾಗೂ ಪ್ರಾಮಾಣಿಕತೆ ಅವರ ಬಂಡವಾಳವಾಗಿತ್ತು. ಕಂಡಂತೆ ಹೇಳುವ ನೇರ ನುಡಿಯ ವ್ಯಕ್ತಿತ್ವ ಅವರದು.

ಅನ್ಯಾಯವನ್ನು ಪ್ರತಿಭಟಿಸುವ ಅವರ ಸ್ವಭಾವದಿಂದಾಗಿ ಕೆಲವರ ಮನಸ್ಸಿಗೆ ನೋವಾಗಿರುವಂತಹ ಪ್ರಸಂಗಗಳು ನಡೆದಿದ್ದರೂ ಯಾರೊಂದಿಗೂ ವಿರೋಧವನ್ನು ಕಟ್ಟಿಕೊಂಡಿರಲಿಲ್ಲ. ಯಾವ ಕೆಲಸವನ್ನೂ ಸಣ್ಣದೆಂದು ಭಾವಿಸಿದವರೇ ಅಲ್ಲ. ನಾನು ಮೆಡಿಕಲ್ ಸೇರಿದಾಗ "ವಾರ್ಡ್‌ಬಾಯ್ ಕೂಡಾ ನಿನ್ನ ಗುರುವೇ, ಆಗಿರುತ್ತಾರೆ. ಉದಾಹರಣೆಗೆ ಎನಿಮಾ ಕೊಡುವುದನ್ನು ಪ್ರೊಫೆಸರ್ ಕಲಿಸುವುದಿಲ್ಲ. ವಾರ್ಡ್‌ಬಾಯ್ ಯಿಂದಲೇ ಕಲಿಯಬೇಕಾಗುತ್ತದೆ. ಆದ್ದರಿಂದ ಆತನೂ ಗುರುವಾಗುತ್ತಾನೆ" ಎಂದು ಹೇಳಿದುದು ನನಗಿನ್ನೂ ನೆನಪಿದೆ. ಅದನ್ನು ಈಗ ನಾನು ನನ್ನ ಜೂನಿಯರ್‌ಗಳಿಗೆ ಹೇಳಿತ್ತಿರುತ್ತೇನೆ. ಶ್ರೀಮಂತರ, ಅಧಿಕಾರಿಗಳ ಮುಂದೆ ಹಲ್ಲು ಕಿಸಿಯುವುದು, ಬಡವರ ಮುಂದೆ ದರ್ಪ ತೋರಿಸುವುದು ಅವರಿಗಾಗುತ್ತಿರಲಿಲ್ಲ. ಎಲ್ಲರೂ ಒಂದೇ ಎಂಬ ಅಧ್ವೈತ ತತ್ವವನ್ನು ಅವರು ತನಗರಿವಿಲ್ಲದಂತೆ ತನ್ನ ಜೀವನದಲ್ಲಿ ಅಳವಡಿಸಿಕೊಂಡಿದ್ದರು.

1964ರಲ್ಲಿ ವೈದ್ಯಕೀಯ ಶಿಕ್ಷಣ (ಜಿ.ಸಿ.ಐ.ಯಂ.) ಮುಗಿಸಿದ ಮೇಲೆ ಸರಕಾರಿ ವೃತ್ತಿಗೆ ಸೇರಿ ಆಗಿನ ಉಡುಪಿ ತಾಲೂಕಿನ ಬೇರೆ ಬೇರೆ ಆಸ್ಪತ್ರೆಗಳಲ್ಲಿ ಸೇವೆ ಸಲ್ಲಿಸಿ ಜನಮನ್ನಣೆಗಳಿಸಿದರು. ವೈದ್ಯರೇ ಇಲ್ಲದ ಆ ಕಾಲದಲ್ಲಿ ರಸ್ತೆ ಇಲ್ಲದ ಊರಿನಲ್ಲಿ, ಲೈಟಿಲ್ಲದ ಮನೆಯಲ್ಲಿ ಮಲಗಿದ ಹಣವಿಲ್ಲದ ರೋಗಿಗೆ ಚಿಕಿತ್ಸೆ ನೀಡುವುದು ಈಗಿನ ಕಾಲದ ವೈದ್ಯನಿಗೆ ಊಹಿಸಲೂ ಆಗದ ಮಾತು. ರೋಗಿಗಳ ಮನೆಯಲ್ಲಿ ಹೆರಿಗೆ ನಡೆಸುವುದಂತೂ ಮಾಮೂಲಿಯಾಗಿತ್ತು. ಎಷ್ಟೋಬಾರಿ ಮನೆಭೇಟಿಗೆಂದು ಜಡಿಮಳೆಯಲ್ಲಿ ರೋಗಿಗಳ ಮನೆಗೆ ನಡೆದು ಹೋಗುತ್ತಿದ್ದ ಅಪ್ಪ

(6ನೇ ಪುಟಕ್ಕೆ ...)